# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.43/2023

ದಿನಾಂಕಃ29-01-2026.

| | | |
|---|---|---|
| ಹೆಸರು | ವೆಂಕಟೇಶ ಆರ್ | ಸಿಡಬ್ಲ್ಯೂ- 9 |
| ತಂದೆ ಹೆಸರು | ಲೇಟ್ ಎನ್ ರಂಗಪ್ಪ | ಪಿ ಡಬ್ಲ್ಯೂ- 9 |
| ವಯಸ್ಸು | 52 ವರ್ಷ | |
| ಉದ್ಯೋಗ | ಎ.ಎಸ್.ಐ., | |
| ವಾಸಸ್ಥಳ | ಚಿತ್ರದುರ್ಗ | ಪ್ರಮಾಣ ವಚನ ಬೋಧಿಸಲಾಯಿತು. |

## ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ

2022 ರಿಂದ ಫೆಬ್ರವರಿ-2023 ರವರೆಗೆ ನಾನು ನಾಯಕನಹಟ್ಟಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ03-11-2022 ರಂದು ಸಂಜೆ 6-00 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ 114/2022 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಪ್ರ.ವ.ವ.ಯನ್ನು ಮೇಲಾಧಿಕಾರಿಗಳು ಹಾಗೂ ಘನ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ನಿಪಿಃ1 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ)ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಪ್ರ.ವ.ವ. ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ.ವ.ವ. ನಿಪಿಃ7 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ.7(ಎ)ಅಂತಾ ಗುರುತಿಸಲಾಯಿತು.

2. ದಿಃ04-11-2022 ರಂದು ಪಂಚರಾದ ಚಾಸಾ-2 ಮತ್ತು 3 ರವರಿಗೆ ಪ್ರಕರಣದ ವಿಚಾರವನ್ನು ಅವರಿಗೆ ತಿಳಿಸಿ, ಪಂಚರಾಗಿ ಸಹಕರಿಸುವಂತೆ ಕೋರಿದ್ದು, ಅವರು ಒಪ್ಪಿದ ಮೇರೆಗೆ ಚಾಸಾ-5 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10-00 ರಿಂದ 10-45 ರವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ನಿಪಿಃ2 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಡಿ)ಅಂತಾ ಗುರುತಿಸಲಾಯಿತು. ಅದೇ ದಿನ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ05-11-2022 ರಂದು ಚಾಸಾ-7 ಮತ್ತು 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ08-11-2022 ರಂದು ಆರೋಪಿತರಿಗೆ 41(ಎ)ಸಿ ಆರ್ ಪಿ ಸಿ ರೀತ್ಯಾ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ. ಹಾಗೂ ತನಿಖೆ ಮುಕ್ತಾಯಗೊಂಡಿದ್ದು, ಆರೋಪಿತರ ವಿರುದ್ಧ ಆರೋಪ ಸಾಬಿಪಿತಾಗಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ

ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಓ ಪಿ., ಆರೋಪಿತರ ಪರ ವಕೀಲರಿಂದಃ**

3. ನಾನು ಫೆಬ್ರವರಿ-2022 ರಲ್ಲಿ ನಾಯಕನಹಟ್ಟಿಯ ಠಾಣೆಗೆ ಬಂದಿರುತ್ತೇನೆ. ದೂರು ದಾಖಲಾದ ನಂತರ ಪ್ರ.ವ.ವ. ದಾಖಲಿಸಿ ತನಿಖೆ ಮುಂದುವರೆಸುವ ಮುನ್ನ ಮೇಲಾಧಿಕಾರಿಗಳ ಅನುಮತಿಯನ್ನು ಪಡೆಯುತ್ತೇವೆ ಎಂದರೆ ಸರಿ. ತನಿಖೆಯ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿಯಲ್ಲ. ದಿನನಿತ್ಯದ ತನಿಖೆಯ ಸಂಬಂಧ ಠಾಣಾ ದಿನಚರಿಯಲ್ಲಿ ನಮೂದು ಮಾಡುವುದಿಲ್ಲ. ದಿನಚರಿಯಲ್ಲಿ ತನಿಖೆಯ ಸಂಬಂಧ ಠಾಣಾ ದಿನಚರಿಯಲ್ಲಿ ನಮೂದು ಮಾಡುವುದು ನಿಯಮ ಎಂದರೆ ಸಾಕ್ಷಿಯು ಸಾಮಾನ್ಯವಾಗಿ ನಾವು ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಈ ಕೇಸಿನ ಪೂರಾ ತನಿಖೆಯನ್ನು ನಾನೇ ಮಾಡಿರುತ್ತೇನೆ.

4. ನಿಪಿಃ1 ರಲ್ಲಿ ಗಲಾಟೆಯಾದ ದಿಃ24-10-2022 ಮತ್ತು ದಿಃ28-10-2022 ಎಂದು ನಮೂದು ಇದ್ದರು ನಿಪಿಃ2 ರ ಪಂಚನಾಮೆಯಲ್ಲಿ ಗಲಾಟೆಯ ದಿನ ದಿಃ03-11-2022 ಎಂದು ಸುಳ್ಳಾಗಿ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿಯು ಪಿರ್ಯಾದನ್ನು ದಿಃ03-11-2022 ರಂದು ನೀಡಲಾಗಿತ್ತು ಎಂದು ನುಡಿಯುತ್ತಾರೆ. ನಾನು ದಿಃ28-10-2022 ರಂದು ಆದ ಗಲಾಟೆಯ ಬಗ್ಗೆ ತನಿಖೆಯನ್ನು ಮಾಡಿರುತ್ತೇನೆ. ಪಿರ್ಯಾದಿ ಮತ್ತು ಆರೋಪಿತರ ನುಡವೆ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಮಾತುಕತೆ ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಗಲಾಟೆಯು ಸಹ ಆಗಿರುತ್ತದೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿಗಳನ್ನು ವಿಚಾರಣೆ ಮಾಡದೆ, ಯಾವುದೇ ಮಹಜರನ್ನು ಜರುಗಿಸದೆ ಕೇವಲ ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ದಿಃ24-10-2022 ಮತ್ತು ದಿಃ28-10-2022 ರಂದು ಗಲಾಟೆ ಆಗಿದೆ ಎಂದು ಪಿರ್ಯಾದಿ ತಡವಾಗಿ ದಿಃ03-11-2022 ರಂದು ನೀಡಿರುವ ದೂರಿನ ಕಾಳವಿಳಂಬದ ಬಗ್ಗೆ ನಾನು ವಿಚಾರಣೆ ಮಾಡಿದ್ದು, ಆದರೆ ದೋಷಾರೋಪಣಾ ಪಟ್ಟಿಯಲ್ಲಿ ಕಾಲವಿಳಂಬದ ಕಾರಣದ ಬಗ್ಗೆ ವಿವರಿಸಿಲ್ಲ. ದೂರಿನಲ್ಲಿ ಆರೋಪಿತರು ಒಂದು ಬಾಟಲಿನಲ್ಲಿ ಚಾಸಾ-1 ರವರಿಗೆ ಹಲ್ಲೆ ಮಾಡಿರುವುದಾಗಿ ಹೇಳಿದ್ದು, ಸದರಿ ಬಾಟಲಿಯನ್ನು ನಾನು ತನಿಖೆಯ ಕಾಲದಲ್ಲಿ ವಶಪಡಿಸಿಕೊಂಡಿಲ್ಲ. ದೂರಿನಲ್ಲಿ ತಿಳಿಸಿರುವ ಹಾಗೆ ಬೆಳಿಗ್ಗೆ 6-00 ಗಂಟೆಗೆ ಚಾಸಾ-1 ರವರು ಹೋಗುವಾಗ ಆರೋಪಿತರು ತಡೆದು ನಿಲ್ಲಿಸಿರುವುದಾಗಿ ಆರೋಪಿಸಿದ್ದು, ಸದರಿ ಜಾಗದ ಸ್ಥಳ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದ ಚೆಕ್ ಬಂದಿ ಪೂರ್ವಕ್ಕೆ

ಸರ್ಕಾರಿ ಜಮೀನು, ಪಶ್ಚಿಮಕ್ಕೆ ಚಾಸಾ-1 ರವರ ಮನೆ, ಉತ್ತರಕ್ಕೆ ಕೊರಡಿಹಳ್ಳಿಯಿಂದ



ಜಮೀನುಗಳಿಗೆ ಹೋಗುವ ಟಾರ್ ರಸ್ತೆ, ದಕ್ಷಿಣಕ್ಕೆ ಕೊರಡಿಹಳ್ಳಿ ಬಸ್ ನಿಲ್ದಾಣಕ್ಕೆ ಹೋಗುವ ರಸ್ತೆ ಇರುತ್ತದೆ. ನಿಪಿಃ2 ರ ಪಂಚನಾಮೆಯಲ್ಲಿ ಆರೋಪಿತರು ಚಾಸಾ-1 ರವರನ್ನು ತಡೆದು ನಿಲ್ಲಿಸಿದ ಜಾಗ ಎಂದು ನಿಖರವಾಗಿ ನಮೂದು ಇಲ್ಲ ಎಂದರೆ ಸಾಕ್ಷಿಯು ಚಾಸಾ-1 ರವರು ತೋರಿಸಿದ ಜಾಗದಲ್ಲಿ ಮಹಜರ ಮಾಡಲಾಗಿದೆ ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ-1 ರವರನ್ನು ತಡೆಯದೆ ಇದ್ದರೂ, ಆರೋಪಿತರು ಹಾಗೂ ಚಾಸಾ-1 ರವರ ನಡುವೆ ಯಾವುದೇ ರೀತಿಯ ಗಲಾಟೆ ಆಗದೆ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಮರು ಹೇಳಿಕೆಯನ್ನು ನೀಡುತ್ತೇನೆಂದು ಚಾಸಾ-1 ರವರು ನನಗೆ ಯಾವುದೇ ರೀತಿಯ ಅರ್ಜಿ ಸಲ್ಲಿಸಿಲ್ಲ. ಮರು ಹೇಳಿಕೆಯನ್ನು ಪಡೆಯಲು ಚಾಸಾ-1 ರವರಿಗೆ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸ್ ನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿಲ್ಲ. ಪಂಚನಾಮೆಯ ದಿನದಂದು ಪಿರ್ಯಾದಿಗೆ ಪಂಚನಾಮೆಗೆ ಬರುವಂತೆ ಮಾಹಿತಿ ನೀಡಿಲ್ಲ. ನಿಪಿಃ2 ರ ಪಂಚನಾಮೆಗೆ ಚಾಸಾ-1 ರವರ ಸಹಿ ಪಡೆದಿರುತ್ತೇನೆ. ಪಂಚರಾದ ಚಾಸಾ-2 ಮತ್ತು 3 ರವರು ಗ್ರಾಮ ಪಂಚಾಯಿತಿ ಸದಸ್ಯರು ಎಂದರೆ ಸರಿ. ಸದರಿಯವರಿಗೂ ಹಾಗೂ ಪೊಲೀಸ ಠಾಣೆಗೂ ನಿರಂತರ ಒಡನಾಟ ಇದೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರಿಗೂ ಹಾಗೂ ಪೊಲೀಸ ಠಾಣೆಗೂ ಉತ್ತಮ ಒಡನಾಟ ಇರುವುವ ಕಾರಣ ನಿಪಿಃ2 ರ ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿ, ಚಾಸಾ-2 ಮತ್ತು 3 ರವರ ಸಹಿಗಳನ್ನು ಠಾಣೆಯಲ್ಲಿ ಪಡೆಯಲಾಗಿದೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ಕುಮ್ಮಕ್ಕಿನಿಂದ 1 ನೇ ಆರೋಪಿ ಚಾಸಾ-1 ರವರ ವಿರುದ್ಧ ಗಲಾಟೆ ಮಾಡಿರುತ್ತಾನೆ ಎಂದು ದೋಷಾರೋಪಣ ಪಟ್ಟಿಯಲ್ಲಿ ನಮೂದು ಇದ್ದು, ಸದರಿ ವಿಚಾರದ ಸಂಬಂಧ ನಾನು ಯಾರನ್ನು ಸಹ ವಿಚಾರಣೆ ಮಾಡಿರುವುದಿಲ್ಲ.

6. ದಿಃ24-10-2022 ರಂದು 1 ನೇ ಆರೋಪಿ ಚಾಸಾ-1 ರವರ ವಿರುದ್ಧ ಪಿರ್ಯಾದನ್ನು ಸಲ್ಲಿಸಲು ಬಂದಾಗ ನಾನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ-1 ರವರು ಅಣ್ಣ ತಮ್ಮಂದಿರಾಗಿದ್ದು, ಸದರಿಯವರ ಮಧ್ಯ ಇರುವ ಸಿವಿಲ್ ವ್ಯಾಜ್ಯವನ್ನು ಬಗೆಹರಿಸಿಕೊಳ್ಳುವ ಸಲುವಾಗಿ ಆರೋಪಿತರನ್ನು ಹೆದರಿಸಲು ಚಾಸಾ-1 ರವರ ಒಟ್ಟಿಗೆ ಷರೀಕಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖೆಯ ಕಾಲದಲ್ಲಿ ಆರೋಪಿತರ ವಿರುದ್ಧ ಯಾವುದೇ ಆರೋಪಗಳು ಸಾಭಿತಾಗಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.



(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.